**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.227/2022

**PW**. 14

**CW**. 16

**ಸಾಕ್ಷಿಯ ಹೆಸರು –ಡಾ. ದೇವಿಕಾ ವಿ**

**ಗಂಡನ ಹೆಸರು – ಕುಮಾರ ಎನ್ ಕೃಷ್ಣಮೂರ್ತಿ**

**ವಯಸ್ಸು –49 ವರ್ಷಗಳು** ದಿನಾಂಕ 27–11–2024 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ಹಿರಿಯ ವೈದಾಧಿಕಾರಿಗಳು , ಎನ್ ಪಿ ಸಿ ಆಸ್ಪತ್ರೆ , ಮೈಸೂರು**

**ವಾಸಸ್ಥಳ – ಮೈಸೂರು**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ನಾನು 2017 ರಿಂದ 2022 ರವರೆಗೆ ಪಿರಿಯಾಪಟ್ಟಣ ತಾಲ್ಲೂಕು ಆಸ್ಪತ್ರೆಯಲ್ಲಿ ತಜ್ಞ ವೈದ್ಯರಾಗಿ ಸೇವೆ ಸಲ್ಲಿಸಿದ್ದೇನೆ.

ದಿಃ 02–03–2020 ರಂದು ರಾತ್ರಿ 8.20 ಗಂಟೆ ಸುಮಾರಿಗೆ ನಾನು ಪಿರಿಯಾಪಟ್ಟಣ ಸಾರ್ವಜನಿಕ ಆಸ್ಪತ್ರೆಯ ತುರ್ತು ಚಿಕಿತ್ಸೆ ವಿಭಾಗದಲ್ಲಿ ಕರ್ತವ್ಯ ಮಾಡುತ್ತಿರುವಾಗ , ಹಲ್ಲೆ ಹಿನ್ನೆಲೆಯಲ್ಲಿ ಗಾಯಾಳು ರವಿಕುಮಾರರವರನ್ನು ಸೋದರ ಸಂಬಂಧಿ ಕುಮಾರಸ್ವಾಮಿ ಎನ್ನುವವರು ಚಿಕಿತ್ಸೆಗೆ ಕರೆದುಕೊಂಡು ಬಂದಿದ್ದರು. ಸದರಿ ಗಾಯಾಳುವಿಗೆ ಪರೀಕ್ಷೆ ನಮಾಡಿ ಚಿಕಿತ್ಸೆ ನೀಡಿದ್ದೇನೆ. ಅವರಿಗೆ ಈ ಕೆಳಕಂಡ ಗಾಯ ಕಂಡುಬಂದಿರುತ್ತವೆ.

1.ಹೊಟ್ಟೆಯ ಬಲಭಾಗದ ಕೆಳಭಾಗದಲ್ಲಿ ಮುಂಭಾಗ ಮತ್ತು ಹಿಂಭಾಗ 2 ರಿಂದ 3 ಸೆಂ ಮೀ ಅಳತೆಯ ತಲಾ ಒಂದು ಒಂದು ಚಾಕುವಿನಿಂದ ಚುಚ್ಚಿದ ಗಾಯವಾಗಿರುತ್ತದೆ.

ಸದರಿ ಗಾಯಾಳುವಿಗೆ ಪ್ರಾಥಮಿಕ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಬೃಂದಾವನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದು, ಅಲ್ಲಿಂದ ಬಂದ ದಾಖಲೆಗಳನ್ನು ನೋಡಿ, ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ. ಸದರಿ ಗಾಯದ ಪ್ರಮಾಣ ಪತ್ರವನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ–28 ಎಂದು ಸಾಕ್ಷಿಯ ಸಹಿಯನ್ನು ನಿಪಿ–28(ಎ) ಎಂದು ಗುರುತಿಸಲಾಯಿತು. ನನ್ನ ಅಭಿಪ್ರಾಯದಲ್ಲಿ ಸದರಿ ಗಾಯವು ತೀವ್ರ ಸ್ವರೂಪದ ಗಾಯವಾಗಿರುತ್ತದೆ.

ದಿಃ 14–05–2020 ರಂದು ಪೊಲೀಸರು ರಾ ಪ್ರಕರಣಕ್ಕೆ ಸಂಬಂಧಿಸಿದಂತೆ ಒಂದು ಚಾಕುವನ್ನು ನನ್ನ ಮುಂದೆ ಹಾಜರು ಮಾಡಿ , ನಿಪಿ–28 ರಲ್ಲಿ ನಮೂದಿಸಿ ಗಾಯಗಳ ಬಗ್ಗೆ ಅಭಿಪ್ರಾಯವನ್ನು ಕೋರಿ ಮನವಿ ಸಲ್ಲಿಸಿರುತ್ತಾರೆ. ಸದರಿ ಚಾಕುವನ್ನು ಪರೀಕ್ಷಿಸಿ ನಾನು ಆ ಬಗ್ಗೆ ಅವರು ನೀಡಿದ ಮನವಿಯ ಹಿಂಭಾಗದಲ್ಲಿ ವರದಿ ನೀಡಿದ್ದೇನೆ. ಸದರಿ ವರದಿಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ–29 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ–29(ಎ) ಎಂದು ಗುರುತಿಸಲಾಯಿತು. ನಾನು ಪರೀಕ್ಷಿಸಿದ ಚಾಕುವನ್ನು ಈಗ ನ್ಯಾಯಾಲಯದ ಮುಂದೆ ನೋಡುತ್ತಿದ್ದು , ಅದನ್ನು ಮು.ಮಾ–6 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ– ಆರೋಪಿ ಪರ ಶ್ರೀ ಎಸ್ ಪಿ ವಕೀಲರಿಂದಃ–**

ಗಾಯಾಳನ್ನು ನಮ್ಮ ಆಸ್ಪತ್ರೆಗೆ ಕರೆದುಕೊಂಡು ಬಂದಾಗ **,** ನಾನು ನೋಡಿದಾಗ **,** ಪ್ರಜ್ಞಾಹೀನ ಸ್ಥಿತಿಯಲ್ಲಿದ್ದರು ಎಂದರೆ ಸರಿ .ಬೃಂದಾವನ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿದ ಬಗ್ಗೆ ದಾಖಲೆಗಳನ್ನು ನನ್ನ ಮುಂದೆ ಹಾಜರು ಮಾಡಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಸ್ಕ್ಯಾನಿಂಗ್ ರಿಪೋರ್ಟ ಹಾಜರು ಮಾಡಿದರು ಎಂದು ನುಡಿಯುತ್ತಾರೆ. ನಿಪಿ**–29** ರ ವರದಿಯದಿಲ್ಲಿ ಮು.ಮಾ**–6** ರ ಅಳತೆ ಮತ್ತು ಮಾದರಿಯನ್ನು ಬರೆದಿಲ್ಲ ಎಂದರೆ ಸರಿ. ನಾನು ಸಹಿ ಮಾಡಿದ ಚೀಟಿಯನ್ನು ಮು.ಮಾ**–6** ರ ಮೇಲೆ ಅಂಟಿಸಿಲ್ಲ ಎಂದರೆ ಸರಿ. ನಾನು ಮು.ಮಾ**–6** ಅನ್ನು ಪರೀಕ್ಷೆ ಮಾಡಿಲ್ಲ

ಎಂದರೆ ಸರಿಯಲ್ಲ. ಪೊಲೀಸರಿಗೆ ಸಹಾಯ ಮಾಡಲು ಅವರ ಕೋರಿಕೆಯ ಮೇರೆಗೆ ನಿಪಿ–28 ಮತ್ತು 29 ಅನ್ನು ನೀಡಿ, ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.